೩೮೭೦ (೪೭೪೬) ಶ್ರೀ ಕೃಷ್ಣ ಕುಮಾರ ಪಾಲೀಮಾರ್ ಜಿ. (ಸುರತ್ಕಲ್) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರ ಜಾರಿಗೊಳಿಸಿದ ಗಿರಿಜನ ಉಪಯೋಜನೆಗಳ ವಿವರಗಳೇನು;

ಆ) ೨೦೦೩-೦೪ ಮತ್ತು ೨೦೦೪-೦೫ ನೇ : ಸಾಲಿನಲ್ಲಿ ಗಿರಿಜನ ಉಪಯೋಜನೆಗಾಗಿ ಆಯವ್ಯಯದಲ್ಲಿ ಒದಗಿಸಿದ ಹಣ ಎಷ್ಟು; ಸದರಿ ಯೋಜನೆಗೆ ಬಂದ ಕೇಂದ್ರದ ನೆರವಿನ ಮೊತ್ತ ಎಷ್ಟು;

ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಈ ಯೋಜನೆಯಡಿ ಸದರಿ ಎರಡು ಸಾಲುಗಳಲ್ಲಿ ಕಾರ್ಯಗೊಳಿಸಿದ ಯೋಜನೆ ಮತ್ತು ವೆಚ್ಚ ಮಾಡಿದ ಮೊತ್ತ ಹಾಗೂ ಫಲಾನುಭವಿಗಳ ಸಂಖ್ಯೆ ಎಷ್ಟು ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಅನುಬಂಧ – ೧ ರಲ್ಲಿ ಒದಗಿಸಿದೆ.

ಆ) ೨೦೦೩-೦೪ ಮತ್ತು ೨೦೦೪-೦೫ ನೇ ಸಾಲನಲಿ ಗಿರಿಜನ ಉಪಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿದ ಅನುದಾನ ಮತ್ತು ಕೇಂದ್ರದ ನೆರವಿನ ಮೊತ್ತದ ವಿವರ ಕೆಳಕಂಡಂತಿದೆ.

ರೂ. ಕೋಟಿಗಳಲ್ಲಿ

ಕಾರ್ಯಕ್ರಮಗಳು	**೨೦೦೩-೦೪**	**೨೦೦೪-೦೫**
ರಾಜ್ಯವಲಯ ಯೋಜನೆ	೧೩೦.೦೯	೯೩.೪೨
ಕೇಂದ್ರವಲಯ ಯೋಜನೆ	೧೪.೩೧	೧೮.೮೨

ಇ) ಅನುಬಂಧ -೨ ರಲ್ಲಿ ಒದಗಿಸಿದೆ.

ಪ್ರಶ್ನೆ ಸಂಖ್ಯೆ : ೪೭೪೬ ರ ಅನುಬಂಧ –೧

ಗಿರಿಜನ ಉಪಯೋಜನೆಯಡಿ ರಾಜ್ಯ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳು :

ಕ್ರ.ಸಂ	ಕಾರ್ಯಕ್ರಮಗಳು
ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು :-	
೧	ಕೃಷಿ ಅಭಿವೃದ್ಧಿ – ಕೃಷಿ ಪರಿಕರಗಳು, ಆಧುನಿಕ ಕೃಷಿ ಉಪಕರಣಗಳು, ಪಂಪ್ ಸೆಟ್, ಸ್ಪ್ರಿಂಕ್ಲರ್ ಸೆಂಟ್, ಪವರ್ ಟಿಲ್ಲರ್, ಉಳಿಮೆ ಎತ್ತುಗಳ ವಿತರಣೆ'
೨	ತೋಟಗಾರಿಕೆ – ಪರಿಶಿಷ್ಟ ವರ್ಗದವರ ಜಮೀನುಗಳಲ್ಲಿ ಅರ್ಧ ಎಕರೆ ತೆಂಗಿನ ತೋಟ, ಒಂದು ಎಕರೆ ಹಣ್ಣಿನ ತೋಟ/ಹೂವಿನತೋಟಗಳ ನಿರ್ಮಾಣ ಹಾಗೂ ೨ ವರ್ಷಗಳವರೆಗೆ ತೋಟಗಳ ಪೋಷಣೆಗೆ ಸಹಾಯಧನ.
೩	ಪಶುಸಂಗೋಪನೆ – ನಬಾರ್ಡ್ ದರದಲ್ಲಿ ಶೇ. ೭೫ರ ಸಹಾಯಧನದಡಿ ಮಿಶ್ರತಳಿ ಹಸುಘಟಕ, ಎಮ್ಮೆಘಟಕ, ಕುರಿಘಟಕ/ಹಂದಿಘಟಕಗಳ ವಿತರಣೆ.
೪	ರೇಷ್ಮೆ ಹಿಪ್ಪನೇರಳೆ ಬೇಸಾಯಕ್ಕೆ ಸಹಾಯಧನ, ರೇಷ್ಮೆ ಹುಳು ಸಾಕಾಣಿಕೆಗೆ ಸಹಾಯಧನ, ರೇರಿಂಗ್ ಹೌಸ್‌ಗಳ ನಿರ್ಮಾಣಕ್ಕೆ ಸಹಾಯಧನ
೫	ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು – ಪರಿಶಿಷ್ಟ ಪಂಗಡದ ಯುವಕ / ಯುವತಿಯರಿಗೆ ಸ್ವಯಂಉದ್ಯೋಗ ಕೈಗೊಳ್ಳಲು ಜೇನು ಸಾಕಾಣಿಕೆ, ಬಡಗಿತನ ಬಿದಿರು ಮತ್ತು ಬೆತ್ತದ ವೃತ್ತಿಗಳಲ್ಲಿ ತರಬೇತಿ ಹಾಗೂ ಉಚಿತ ಸಲಕರಣೆಗಳ ವಿತರಣೆ.
೬	ಉದ್ಯೋಗ ಮತ್ತು ತರಬೇತಿ – ಪರಿಶಿಷ್ಟ ವರ್ಗದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಹೊಲಿಗೆ ತರಬೇತಿ ಹಾಗೂ ಉಚಿತ ಹೊಲಿಗೆ ಯಂತ್ರಗಳ ಪೂರೈಕೆ.

೭	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ – ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸ್ತ್ರೀ ಶಕ್ತಿ ಯೋಜನೆ, ನವಜೀವನ ಯೋಜನೆ, ಉದ್ಯೋಗಿನಿ ಯೋಜನೆಯಡಿ ಸಹಾಯಧನ ವಿತರಣೆ, ಹಾಗೂ ಪರಿಶಿಷ್ಟ ವರ್ಗದ ಮಕ್ಕಳಿಗೆ ವಿಶೇಷ ಪೌಷ್ಟಿಕ ಆಹಾರ ವಿತರಣೆ.
೮.	<u>ಸಾರ್ವಜನಿಕ ಶಿಕ್ಷಣ ಇಲಾಖೆ</u> :–
೧.	ವಿದ್ಯಾವಿಕಾಸ ಯೋಜನೆಯಡಿ ೧ರಿಂದ ೭ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ವಿತರಣೆ.
೨.	೧ ರಿಂದ ೭ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಬಾಲಕಿಯರಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸುವುದು.
೩.	೧ ರಿಂದ ೧೦ನೇ ತರಗತಿವರೆಗಿನ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿ
೪.	ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ಪೂರೈಕೆ
೫.	ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸರ್ಕಾರೇತರ ಶುಲ್ಕ ಮರು ಪಾವತಿ
೯. <u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ</u> : ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಆರ್ಥಿಕ ಸಹಾಯ ಉದ್ಯೋಗ ಮತ್ತು ಜೀವನ ಮಟ್ಟವನ್ನು ಸುಧಾರಿಸಲು ಕೆಳಕಂಡ ಕಾರ್ಯಕ್ರಮಗಳಡಿಯಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.	
೧.	ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ
೨.	ಎಸ್.ಜಿ.ಆರ್.ವೈ

೩.	ಸಮಗ್ರ ಗ್ರಾಮೀಣ ವಸತಿ ಯೋಜನೆ
೪.	ಪ್ರಧಾನ ಮಂತ್ರಿ ಗ್ರಾಮೀಣ ಯೋಜನೆ
ಮೂಲಭೂತ ಸೌಲಭ್ಯ :	
೧	ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಕುಡಿಯುವ ನೀರಿನ ಸೌಲಭ್ಯ
೨	ಗ್ರಾಮೀಣ ನೈರ್ಮಲ್ಯ ಯೋಜನೆಯಡಿಯಲ್ಲಿ ಸಂಪರ್ಕ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ.
೩	ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ವಿದ್ಯುದ್ದೀಕರಣ ಮತ್ತು ಭಾಗ್ಯಜ್ಯೋತಿ ಯೋಜನೆಯಡಿ ಮನೆಗಳಿಗೆ ವಿದ್ಯುತ್ ಸಂಪರ್ಕ.

ಪ್ರಶ್ನೆ ಸಂಖ್ಯೆ :4746ರ ಅನುಬಂಧ-೨

೨೦೦೩-೦೪ ಮತ್ತು ೨೦೦೪-೦೫ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗಿರಿಜನ ಉಪ ಯೋಜನೆಯಡಿ ಮಾಡಿದ ಖರ್ಚು ಮತ್ತು ಹಾಗೂ ಫಲಾನುಭವಿಗಳ ವಿವರಗಳು ಕೆಳಕಂಡಂತಿವೆ.

ಜಿಲ್ಲೆ ಹೆಸರು	ಕಾರ್ಯಕ್ರಮಗಳ ವಿವರ	೨೦೦೩-೦೪		೨೦೦೪-೦೫	
		ಖರ್ಚು ಮಾಡಿದ ಮೊತ್ತ	ಫಲಾನುಭವಿಗಳ ಸಂಖ್ಯೆ	ಖರ್ಚು ಮಾಡಿದ ಮೊತ್ತ	ಫಲಾನುಭವಿಗಳ ಸಂಖ್ಯೆ
ದಕ್ಷಿಣ ಕನ್ನಡ	ಗಿರಿಜನ ಉಪಯೋಜನೆ ರಾಜ್ಯ	೪೭.೫೮	೧೧೩೩	೭೦.೭೦	೧೦೬೬
	ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ಸಹಾಯಧನ	೩೨.೧೦	೩೨೦	೫೦.೪೦ ೨೦೦೪-೦೫ನೇ ಸಾಲಿನ ಕಾರ್ಯಕ್ರಮಗಳಿಗೆ ವರ್ಷಾಂತ್ಯದಲ್ಲಿ ಹಣ ವಿಮುಗಡೆ ಮಾಡಿದ್ದು ೨೦೦೫-೦೬ನೇ ಸಾಲಿನಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ	-
	ಭಾರತ ಸಂವಿಧಾನ ಅನುಚ್ಛೇದ೨೭೫(೧)ರಡಿ ಅನುಷ್ಠಾನಗೊಳಿಸಿದ ಕಾರ್ಯಕ್ರಮ	೧೮.೦೦	೪೮	೫೦.೦೦ ೨೦೦೪-೦೫ನೇ ಸಾಲಿನ ಕಾರ್ಯಕ್ರಮಗಳಿಗೆ ವರ್ಷಾಂತ್ಯದಲ್ಲಿ ಹಣ ವಿಮುಗಡೆ ಮಾಡಿದ್ದು ೨೦೦೫-೦೬ನೇ ಸಾಲಿನಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿರೆ	-
	ಆದಿಯುಗ ಪಂಗಡ ಅಭಿವೃದ್ಧಿ ಕಾರ್ಯಕ್ರಮ	-	-	೭.೦೦	೬೮
	ಒಟ್ಟು	೯೮.೬೮	೧೫೫೧	೧೨೭.೬೦	೧೧೩೪
ಉಡುಪಿ	ಗಿರಿಜನ ಉಪಯೋಜನೆ ರಾಜ್ಯ	೩೮.೦೮	೨೭೫	೪೭.೫೯	೪೫೧
	ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ಸಹಾಯಧನ	೧೧.೫೫	೧೭೫	-	-
	ಒಟ್ಟು	೪೯.೬೩	೪೫೦	೪೭.೫೯	೪೫೧